ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**126**
ಸದಸ್ಯರ ಹೆಸರು	:	ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	13.12.2021
ಉತ್ತರಿಸುವ ಸಚಿವರು	:	ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

*****

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>EMPLOYMENT NOTIFICATION NO KPTCL/B16/86393, 2018-19 KPTCL, BESCOM, HESCOM, CESCOM, MESCOM, GESCOM ಈ ಇಂಧನ ಇಲಾಖೆಯ ನಿಗಮ ಸಂಸ್ಥೆಗಳಲ್ಲಿ ನೇಮಕಾತಿ ಆದೇಶ ಮಾಡಿ ಅರ್ಜಿಗಳನ್ನು ಆಹ್ವಾನಿಸಿದ್ದು, ರಾಜ್ಯಾದ್ಯಾಂತ ಎಷ್ಟು ಅಭ್ಯರ್ಥಿಗಳಿಂದ ಅರ್ಜಿಗಳು ಸಲ್ಲಿಸಲಾಗಿವೆ; (ಸಂಪೂರ್ಣ ಮಾಹಿತಿ ನೀಡುವುದು)</td><td>ಈ ನೇಮಕಾತಿಗೆ ಸಂಬಂಧಿಸಿದಂತೆ ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ.</th><th>ಹುದ್ದೆಯ ಹೆಸರು</th><th>ಒಟ್ಟು ಅರ್ಜಿ ಸಂಖ್ಯೆ</th><th>ಅರ್ಜಿ ಶುಲ್ಕ ಪಾವತಿಯಾಗಿರುವ ಅರ್ಜಿಗಳ ಸಂಖ್ಯೆ</th></tr>
<tr><td>1</td><td>ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)</td><td>12179</td><td>12040</td></tr>
<tr><td>2</td><td>ಸಹಾಯಕ ಇಂಜಿನಿಯರ್(ವಿ)</td><td>22170</td><td>21988</td></tr>
<tr><td>3</td><td>ಸಹಾಯಕ ಇಂಜಿನಿಯರ್(ಸಿ)</td><td>14289</td><td>14128</td></tr>
<tr><td>4</td><td>ಕಿರಿಯ ಇಂಜಿನಿಯರ್(ವಿ)</td><td>21060</td><td>20840</td></tr>
<tr><td>5.</td><td>ಕಿರಿಯ ಇಂಜಿನಿಯರ್(ಸಿ)</td><td>8332</td><td>8213</td></tr>
<tr><td>6.</td><td>ಕಿರಿಯ ಆಪ್ತ ಸಹಾಯಕ</td><td>592</td><td>316</td></tr>
<tr><td>7</td><td>ಕಿರಿಯ ಸಹಾಯಕ</td><td>136647</td><td>131370</td></tr>
<tr><td colspan="2">ಒಟ್ಟು</td><td>215269</td><td>208895</td></tr>
</table>
</td></tr>
<tr><td>ಆ)</td><td>ಸದರಿ ಅಧಿಸೂಚನೆಯಲ್ಲಿ ಎ.ಇ.ಜೆ.ಇ ಕಿರಿಯ ಆಪ್ತ ಸಹಾಯಕ ಮತ್ತು ಕಿರಿಯ ಸಹಾಯಕ ಮತ್ತು ಕಿರಿಯ ಸಹಾಯಕ ಹುದ್ದೆಗಳ ನೇಮಕಾತಿಯನ್ನು ರದ್ದುಪಡಿಸಲಾಗಿದೆಯೇ; ರದ್ದುಪಡಿಸಿದ್ದಲ್ಲಿ, ಯಾವ ಕಾರಣಗಳಿಂದ ರದ್ದುಪಡಿಸಲಾಗಿದೆ;</td><td>ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಉಂಟಾಗಿದ್ದ ನೆರೆ ಹಾವಳಿಯಿಂದಾಗಿ ಕವಿಪ್ರನಿನಿ ಮತ್ತು ಎಸ್ಕಾಂಗಳ ಸಿಬ್ಬಂದಿಗಳು ನಿರಂತರ ವಿದ್ಯುತ್ ಸರಬರಾಜು ಪೂರೈಕೆ ಕಾರ್ಯದಲ್ಲಿ ನಿರತರಾಗಿದ್ದರಿಂದ ಹಾಗೂ ಮಾರ್ಚ್-2020 ರಿಂದ ಕೊರೊನಾ ವೈರಸ್ ಹರಡುವಿಕೆಯಿಂದ, ವಾಣಿಜ್ಯ/ಕೈಗಾರಿಕಾ ಸ್ಥಾವರಗಳ ವಿದ್ಯುತ್ ಬೇಡಿಕೆ ಕಡಿಮೆಯಾಗಿದ್ದುದರಿಂದ, ಕಂದಾಯ ವಸೂಲಾತಿಯಲ್ಲಿ ಗಣನೀಯ ಇಳಿಕೆಯಾಗಿ ಕವಿಪ್ರನಿನಿ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗಿರುತ್ತದೆ. ಸದರಿ ಪರಿಸ್ಥಿತಿಯನ್ನು ನಿಭಾಯಿಸಿ ಆರ್ಥಿಕ ಸ್ಥಿತಿಯನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸುವುದು ಅಗತ್ಯವಾಗಿದ್ದುದರಿಂದ ಹಾಗೂ ಸರ್ಕಾರದ ಆರ್ಥಿಕ ಇಲಾಖೆಯು ದಿನಾಂಕ: 06.07.2020 ರ ಸುತ್ತೋಲೆಯಲ್ಲಿ, 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು ಮತ್ತು ಬ್ಯಾಕ್ ಲಾಗ್ ಹುದ್ದೆಗಳು ಸೇರಿದಂತೆ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲು ಸೂಚಿಸಿರುತ್ತದೆ. ಅಲ್ಲದೆ, ಈ ಹುದ್ದೆಗಳಿಗೆ ಆಪ್ಟಿಟ್ಯೂಡ್ ಪರೀಕ್ಷಾ ಪ್ರಕ್ರಿಯೆಯು ಪ್ರಾರಂಭಗೊಳ್ಳದೆ ಇದ್ದುದರಿಂದ ಮತ್ತು ನಿಗಮ/ಎಸ್ಕಾಂಗಳ ವೆಚ್ಚದ ಬಾಬ್ತಿನಲ್ಲಿ ಮಿತವ್ಯಯ ಪಾಲಿಸುವ ಅವಶ್ಯಕತೆ ಇದ್ದುದರಿಂದ, ಸರ್ಕಾರದ ಅನುಮೋದನೆಯನ್ನು ಪಡೆದು, AE, JE, JPA, JA ಹುದ್ದೆಗಳು ಸೇರಿದಂತೆ, ಒಟ್ಟು 1559 ಹುದ್ದೆಗಳನ್ನು ಭರ್ತಿ ಮಾಡುವ</td></tr>
</table>

...2

		ಪ್ರಕ್ರಿಯೆಯನ್ನು ಆಡಳಿತಾತ್ಮಕ ಕಾರಣಗಳಿಂದಾಗಿ '<u>ರದ್ದುಗೊಳಿಸುವ ಅಂಶವನ್ನು</u>' ದಿನಾಂಕ: 09.09.2020 ರಂದು ನಡೆದ ನಿಗಮದ ನಿರ್ದೇಶಕರುಗಳ 121ನೇ ಮಂಡಳಿ ಸಭೆಯ ಗಮನಕ್ಕೆ ತಂದು, ದಿನಾಂಕ: 21.11.2020 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.
ಇ)	ಮೇಲಿನ ಅಧಿಸೂಚನೆಯಲ್ಲಿ ಅರ್ಜಿಯನ್ನು ಸಲ್ಲಿಸುವ ಅಭ್ಯರ್ಥಿಗಳಿಗೆ, ಅರ್ಜಿ ಶುಲ್ಕವನ್ನು ಸಾಮಾನ್ಯ ಹಾಗೂ ಹಿಂದುಳಿದ ವರ್ಗ ಅಭ್ಯರ್ಥಿಗಳಿಗೆ 500 ರೂ ಮತ್ತು ಎಸ್.ಸಿ ಎಸ್.ಟಿ ಅಭ್ಯರ್ಥಿಗಳಿಗೆ 300 ರೂ. ನಿಗಧಿಪಡಿಸಿದ್ದು, ಇಂಧನ ಇಲಾಖೆಯ ಎಲ್ಲಾ ನಿಗಮ ಸಂಸ್ಥೆಗಳು ಸ್ವೀಕರಿಸಿರುವ ಅರ್ಜಿ ಶುಲ್ಕದ ಒಟ್ಟು ಮೊತ್ತ ಎಷ್ಟು; (ಎಲ್ಲಾ ನಿಗಮ ಸಂಸ್ಥೆಗಳವಾರು ಸಂಪೂರ್ಣ ಮಾಹಿತಿಯನ್ನು ನೀಡುವುದು)	ಈ ಹುದ್ದೆಗಳಿಗೆ ಅರ್ಜಿ ಸಲ್ಲಿಕೆಯಿಂದ ಸಂಗ್ರಹವಾಗಿರುವ ಒಟ್ಟು ಮೊತ್ತ ರೂ.9.11 ಕೋಟಿಗಳಷ್ಟಾಗಿದ್ದು, ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.
ಈ)	ಅಧಿಸೂಚನೆಯಲ್ಲಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ ಎಂದು ತಿಳಿಸಿದ್ದು, ಆದರೆ ಅಧಿಸೂಚನೆಯನ್ನೇ ರದ್ದುಪಡಿಸಿದ ಮೇಲೆ ಪರೀಕ್ಷೆಯನ್ನು ನಡೆಸಿರುವುದಿಲ್ಲವಾದರೂ ಸಹ ಪರೀಕ್ಷಾ ಶುಲ್ಕವನ್ನು ಹಿಂದಿರುಗಿಸದೇ ಇರಲು ಕಾರಣ ಏನು; (ಉತ್ತರ ನೀಡುವುದು)	ನಿಗಮದ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ /ಬಿ16/ 86393/2018-19 (ಎನ್.ಹೆಚ್.ಕೆ./ಹೆಚ್.ಕೆ) ದಿನಾಂಕ: 25.02.2019 ಹಾಗೂ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/86393 (ಹೆಚ್.ಕೆ.)/2018-19 ದಿನಾಂಕ: 04.01.2020 ರ ಕಂಡಿಕೆ 5 ರಲ್ಲಿ "Application Fee (Non-Refundable)" ಹಾಗೂ ಕ್ರಮವಾಗಿ ಕಂಡಿಕೆ-(11/9) ರ ಸಾಮಾನ್ಯ ಸೂಚನೆಯ ಉಪ ಕ್ರಮಾಂಕ-(xv/xvi/xvii) ರಲ್ಲಿ "The application fee paid will not be refunded or adjusted towards any future recruitment under any circumstances" ಎಂದು ತಿಳಿಸಲಾಗಿರುತ್ತದೆ. ಆದ್ದರಿಂದ, ಅರ್ಜಿ ಶುಲ್ಕವನ್ನು ಹಿಂದಿರುಗಿಸಲು ಅವಕಾಶವಿರುವುದಿಲ್ಲ.
ಉ)	ಅಭ್ಯರ್ಥಿಗಳಿಂದ ಪಡೆದ ಅರ್ಜಿ ಶುಲ್ಕವನ್ನು ಯಾವ ಕಾಲಮಿತಿಯೊಳಗೆ ವಾಪಸ್ ನೀಡಲಾಗುವುದು ಅಭ್ಯರ್ಥಿಗಳಿಗೆ ಹಿಂದಿರುಗಿಸುವ ತೆಗೆದುಕೊಂಡ ಕ್ರಮವೇನು; (ಸಂಪೂರ್ಣ ಮಾಹಿತಿ ನೀಡುವುದು)	

ಊ)	ರದ್ದುಪಡಿಸಿದ ಅಧಿಸೂಚನೆಯನ್ನು ಮರಳಿ ಹೊರಡಿಸಿ ನೇಮಕಾತಿ ಮಾಡಿ, ನಿರುದ್ಯೋಗಿ ಅಭ್ಯರ್ಥಿಗಳಿಗೆ ಉದ್ಯೋಗ ಒದಗಿಸುವ ಮತ್ತು ಇಂಧನ ಇಲಾಖೆಯ ನಿಗಮ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಿ ಈ ಸಂಸ್ಥೆಗಳ ಕಾರ್ಯವೈಖರಿಯನ್ನು ಉತ್ತಮಪಡಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ ; ಹೊಂದಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಪರೀಕ್ಷೆ ನಡೆಸಿ, ನೇಮಕಾತಿ ಮಾಡಲಾಗುವುದು ? (ಸಂಪೂರ್ಣ ಮಾಹಿತಿ ನೀಡುವುದು)	ಈಗಾಗಲೇ ರದ್ದುಗೊಳಿಸಿರುವ ಅಧಿಸೂಚನೆಯಲ್ಲಿ ಒಳಗೊಂಡಿರುವ ಹುದ್ದೆಗಳನ್ನು ಮರು ನೇಮಕಾತಿ ಮಾಡುವ ಅವಶ್ಯಕತೆ ಇದ್ದಲ್ಲಿ, ಅಂತಹ ಪ್ರಸ್ತಾವನೆಯ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಎನರ್ಜಿ 264 ಇಬಿಎಸ್ 2021

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು